# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

1 ರಿಂದ 4ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು
ಕಛೇರಿ ದೂರವಾಣಿ ಸಂಖ್ಯೆ: 080-22392203, ಫ್ಯಾಕ್ಸ್ ಸಂಖ್ಯೆ: 080-22392206
ಇ-ಮೇಲ್ ವಿಳಾಸ: kshrcmember@gmail.com / kshrc2007@gmail.com

ಹೆಚ್.ಆರ್.ಸಿ.ಸಂಖ್ಯೆ:**3804/10/13/2017 (ಬಿ-3)** ದಿನಾಂಕ:21.08.2020
28

**ಇಂದ:**

ವಿಲೇಖನಾಧಿಕಾರಿಗಳು,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,
ಬೆಂಗಳೂರು.

**ಇವರಿಗೆ:**

ದಿ ರಿಜಿಸ್ಟ್ರಾರ್,
ಕರ್ನಾಟಕ ಮೆಡಿಕಲ್ ಕೌನ್ಸಿಲ್,
ಬೆಂಗಳೂರು.

**ಮಾನ್ಯರೆ,**

**ವಿಷಯ:**ಹೆಚ್.ಆರ್.ಸಿ.ಸಂಖ್ಯೆ:**3804/10/13/2017 (ಬಿ-3)** ಪ್ರಕರಣದ ಕುರಿತು.

******

ಮೇಲ್ಕಂಡ ಪ್ರಕರಣವನ್ನು ದಿನಾಂಕ:21.08.2020 ರಂದು ಆಯೋಗದ ಮುಂದೆ ಮಂಡಿಸಿದಾಗ, ಆಯೋಗವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ:-

**ಆದೇಶ**

"ದಿನಾಂಕ:11.06.2016 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ "ಕೋಲಾರದಲ್ಲಿ ಖಾಸಗಿ ಆಸ್ಪತ್ರೆ ವೈದ್ಯರ ಅಚಾತುರ್ಯ ಜೀವಂತ ವ್ಯಕ್ತಿಯು ಮೃತನೆಂದು ಘೋಷಿಸಿದ ವೈದ್ಯರು" ಎಂಬ ಪತ್ರಿಕಾ ವರದಿಯನ್ನು ಆಯೋಗವು ಸ್ವಯಂ ಪ್ರೇರಿತ ದೂರನ್ನಾಗಿ ದಾಖಲಿಸಿಕೊಂಡು ವರದಿ ಸಲ್ಲಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೋಲಾರ ಜಿಲ್ಲೆ, ಇವರಿಗೆ ನಿರ್ದೇಶನ ನೀಡಲಾಗಿತ್ತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೋಲಾರ ಜಿಲ್ಲೆ ಅವರು ತಾಲ್ಲೂಕು ಆರೋಗ್ಯಾಧಿಕಾರಿಗಳು, ಕೋಲಾರ ತಾಲ್ಲೂಕು ಅವರಿಗೆ ವರದಿ ಸಲ್ಲಿಸುವಂತೆ ತಿಳಿಸಿದ್ದರ ಮೇರೆಗೆ ಸದರಿಯವರು ದಿ:25.10.2016 ರಂದು ಆರ್.ಎಲ್ ಜಾಲಪ್ಪ ಆಸ್ಪತ್ರೆ ಹಾಗೂ ದಿ:21.11.2016 ರಂದು ರೋಗಿಯ ಮನೆಗೆ ಭೇಟಿ ನೀಡಿ ಆಸ್ಪತ್ರೆಯ ದಾಖಲೆಗಳನ್ನು ಪರಿಶೀಲಿಸಿ, ವೆಂಕಟೇಶ್ ಪತ್ನಿಯ ಹೇಳಿಕೆಗಳನ್ನು ದಾಖಲಿಸಿಕೊಂಡು ಸಲ್ಲಿಸಿರುವ ವರದಿಯಲ್ಲಿ, ಕೋಲಾರ ತಾಲ್ಲೂಕು, ಬೀಚಗೊಂಡನಹಳ್ಳಿಯ 38 ವರ್ಷದ ವೆಂಕಟೇಶ್‌ರವರಿಗೆ ಕಳೆದ 20 ವರ್ಷಗಳಿಂದ ಎಡಭಾಗದ ತೋಳಿನ ಮೇಲೆ ಸಣ್ಣದಾದ ಊತ ಮತ್ತು ನೋವು ಇದ್ದ ಕಾರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ವಾಸಿಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾದ್ದರಿಂದ ದಿ:07.06.2016 ರಂದು ಆರ್.ಎಲ್.ಜಾಲಪ್ಪ ಆಸ್ಪತ್ರೆಯ ಒಳರೋಗಿಯಾಗಿ ದಾಖಲಾಗಿದ್ದರು. ಸದರಿ ಆಸ್ಪತ್ರೆಯ ವೈದ್ಯರು ಚಿಕಿತ್ಸೆ ನೀಡಿ ರೋಗಿಯು ಕೋಮ ಸ್ಥಿತಿಯಲ್ಲಿದ್ದುದ್ದನ್ನು ಗಮನಿಸಿ ಮೃತಪಟ್ಟಿದ್ದಾರೆಂದು ವಾರಸುದಾರರ ವಶಕ್ಕೆ ನೀಡಿದ್ದ ಶವವನ್ನು ಅಂತ್ಯಕ್ರಿಯೆಗೆ ಆಸ್ಪತ್ರೆಯಿಂದ ತೆಗೆದುಕೊಂಡು ಹೋಗುವ ಸಮಯದಲ್ಲಿ ವೇಮಗಲ್

ಗ್ರಾಮದ ಸಮೀಪದ ಹಂಪ್ ಹತ್ತಿರ ವಾಹನವು ಎತ್ತಿ ಕುಕ್ಕಿದಾಗ ರೋಗಿಯ ಬಾಯಲ್ಲಿ ಜೊಲ್ಲು ಬಂದಿದ್ದನ್ನು ಗಮನಿಸಿದ್ದಾಗಿ ರೋಗಿಯು ಉಸಿರಾಡುತ್ತಿದ್ದು, ತಕ್ಷಣವೇ ಯಲಹಂಕದ ಆಸ್ಪತ್ರೆಯಲ್ಲಿ 3 ತಿಂಗಳು ಚಿಕಿತ್ಸೆ ಪಡೆದಿರುತ್ತಾರೆ. ಆದರೆ ರೋಗಿಯು ಜೀವಂತವಾಗಿದ್ದರೂ ಸಹ ತಪ್ಪಾಗಿ ಮೃತಪಟ್ಟಿದ್ದಾರೆಂದು ದೃಢೀಕರಣ ಪತ್ರ ನೀಡಿರುವುದು ಕೇಸ್‌ಶೀಟ್‌ನಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಯೂ ಅನುಮಾನಸ್ಪದವಾಗಿದೆ ಎಂದು ತಾಲ್ಲೂಕು ಆರೋಗ್ಯ ಅಧಿಕಾರಿಗಳು, ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ರೋಗಿಯು ಜೀವಂತವಾಗಿದ್ದರೂ ಸಹ ಮೃತಪಟ್ಟಿದ್ದಾರೆಂದು ದೃಢೀಕರಣ ಪತ್ರ ನೀಡಲು ಕಾರಣರಾದ ವೈದ್ಯರ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೋಲಾರ ಜಿಲ್ಲೆ ರವರಿಗೆ ಸೂಚಿಸಿದ್ದು, ಅದರನ್ವಯ ಕೆಳಕಂಡಂತೆ ವರದಿ ಸಲ್ಲಿಸಿದ್ದಾರೆ.

ಆರ್ ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಶ್ರೀ ವೆಂಕಟೇಶ್‌ರವರು Elective Soft Tissue Biopsy ಶಸ್ತ್ರ ಚಿಕಿತ್ಸೆಗೆ ಒಳರೋಗಿಯಾಗಿ ದಾಖಲಾಗಿದ್ದು, ಈ ಶಸ್ತ್ರಚಿಕಿತ್ಸೆಗೆ ಫಿಜಿಷಿಯನ್ ಹೆಚ್ಚಿನ ಪರೀಕ್ಷೆಗೆ ರೋಗಿಯನ್ನು ಒಳಪಡಿಸಿ ವರದಿಯ ನಂತರ ಶಸ್ತ್ರ ಚಿಕಿತ್ಸೆ ನಡೆಸಲು ಸೂಚಿಸಿರುತ್ತಾರೆ. ಆದರೆ ಮೂಳೆ ತಜ್ಞರು ಫಿಜಿಷಿಯನ್ ರವರ ಅಭಿಪ್ರಾಯವನ್ನು ಕಡೆಗಣಿಸಿ ರೋಗಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಿರುತ್ತಾರೆ. ಈ ರೋಗಿಗೆ ಅತಿ ತುರ್ತಾಗಿ ಶಸ್ತ್ರ ಚಿಕಿತ್ಸೆ ಮಾಡುವ ಅವಶ್ಯಕತೆ ಇರುವುದಿಲ್ಲ. ರೋಗಿಯು ಶಸ್ತ್ರಚಿಕಿತ್ಸೆ ನಂತರ ನೋವಿನಿಂದ ಬಳಲಿದ್ದು ಅದಕ್ಕೆ ಔಷದೋಪಚಾರ ಮಾಡಿರುವುದು ಮತ್ತು ಐಸಿಯು ನಲ್ಲಿ ರೋಗಿಯು ನೋವು ತಾಳಲಾರದೇ ಮಂಚದಿಂದ ಬಿದ್ದು ನಾಲ್ಕು ಹಲ್ಲುಗಳು ಮುರಿದಿರುವುದು ಕೇಸ್‌ಶೀಟ್‌ನಲ್ಲಿ ಯಾವುದೇ ರೀತಿಯ ವರದಿಯನ್ನು ನಮೂದಿಸಿರುವುದಿಲ್ಲ. ದಿನಾಂಕ:08.06.2016 ರ ಸಂಜೆ 6.45 ರಲ್ಲಿ ಡಾ॥ ವೈಭವ್, ಡಾ॥ ಕಾರ್ತಿಕ್, ಡಾ॥ ಮನ್ನಾ ಇವರುಗಳು ರೋಗಿಯನ್ನು ಪರೀಕ್ಷಿಸಿ ಕೇಸ್ ಶೀಟ್‌ನಲ್ಲಿ ಹಾಕಿರುವ Examination Report ನಲ್ಲಿ ಬಹಳಷ್ಟು ವ್ಯತ್ಯಾಸವು ಕಂಡು ಬಂದಿರುತ್ತದೆ. ಡಾ॥ ವೈಭವ್, ಡಾ॥ ಕಾರ್ತಿಕ್ ರೋಗಿಯನ್ನು ಪರೀಕ್ಷಿಸಿ ರೋಗಿಯು Not Responding to Oral Commands ಎಂದು ಕೇಸ್‌ಶೀಟ್‌ನಲ್ಲಿ ನಮೂದಿಸಿರುತ್ತಾರೆ. ಅದೇ ಸಮಯದಲ್ಲಿ ರೋಗಿಯ ಬಿ.ಪಿ 126/70 mm of Hg ಎಂದು ನಮೂದಿಸಲಾಗಿರುತ್ತದೆ. ಆದರೆ ಇ.ಎನ್.ಟಿ. ಪಿ.ಜಿ ಡಾ॥ ಮನ್ನಾ ರವರು ಬಿ.ಪಿ Could not Measured and patient Conscious and Oriented and Responding to Oral Commands ಎಂದು ಕೇಸ್ ಶೀಟ್‌ನಲ್ಲಿ ನಮೂದಿಸಿರುತ್ತಾರೆ. ಒಂದೇ ಸಮಯದಲ್ಲಿ ಈ ಎರಡು ವೈದ್ಯಾಧಿಕಾರಿಗಳು ಬೇರೆ ಬೇರೆ ವರದಿಗಳನ್ನು ನಮೂದಿಸಿರುತ್ತಾರೆ. ಸಮಯಕ್ಕೆ ಅನುಗುಣವಾಗಿ ರೋಗಿಗೆ ಚಿಕಿತ್ಸೆ ನೀಡುವ ಎಲ್ಲಾ ವೈದಾಧಿಕಾರಿಗಳು ಕ್ರಮಬದ್ಧವಾಗಿ ಕೇಸ್ ಶೀಟ್‌ನಲ್ಲಿ ನಮೂದಿಸುವುದು ನಿಯಮವಾಗಿರುತ್ತದೆ. ಆದರೆ ಇಲ್ಲಿ ಒಂದು ವೈದ್ಯರು 6.00 ಗಂಟೆಯಿಂದ 9.00 ಗಂಟೆಯವರೆಗೆ ಎರಡು ಹಾಳೆಯಲ್ಲಿ ಅವರ ವರದಿಯನ್ನು ದಾಖಲಿಸಿರುತ್ತಾರೆ. ತದನಂತರ 6.45 ಮತ್ತು 6.55 ಡಾ॥ ವೈಭವ್ ಮತ್ತು ಡಾ॥ ಕಾರ್ತೀಕ್ ಅವರ ವರದಿಯನ್ನು ಸಹ ಕೇಸ್ ಶೀಟಿನ ಬೇರೆ ಹಾಳೆಯಲ್ಲಿ 9.00 ಗಂಟೆಯ ವರದಿ ನಂತರ ದಾಖಲಿಸಿರುತ್ತಾರೆ. ಹಾಗೆಯೇ ಡಾ॥ ಮನ್ನಾ ರವರು 6.50 ಸಮಯದ ವರದಿಯನ್ನು ಸಹ ಕೇಸ್ ಶೀಟಿನ ಬೇರೆ ಹಾಳೆಯಲ್ಲಿ 6.55 ರ ವರದಿ ನಂತರ ದಾಖಲಿಸಿರುತ್ತಾರೆ. ಡಾ॥ ಅನಿಶ್ ಕುಮಾರ್ ಹಾಗೂ ಡಾ॥ ವೈಭವ್ 7.00 ಗಂಟೆಯಿಂದ 7.30 ರವರೆಗೆ ಹಾಗೂ ಡಾ॥ ಉಮೇಶ್ ರಾತ್ರಿ 10.00 ಹಾಗೂ 11.00 ಗಂಟೆಯ ವರದಿಯನ್ನು ಕೇಸ್‌ಶೀಟಿನಲ್ಲಿ ಮುಂದಿನ ಹಾಳೆಗಳಲ್ಲಿ ನಮೂದಿಸಿರುತ್ತಾರೆ. ಮತ್ತೆ ಡಾ॥ ಕಾರ್ತಿಕ್ ದಿನಾಂಕ:08.06.2016 ರ ಸಂಜೆ 6.55 ರ ವರದಿಯನ್ನು ಕೇಸ್ ಶೀಟಿನಲ್ಲಿ ದಿನಾಂಕ:09.06.2016 ರ ಮಧ್ಯರಾತ್ರಿ 12.30 ರ ವರದಿ ನಂತರ ಮುಂದಿನ ಹಾಳೆಗಳಲ್ಲಿ ನಮೂದಿಸಿರುತ್ತಾರೆ. ಈ ರೀತಿ

ವೈದ್ಯಾಧಿಕಾರಿಗಳ ಕೇಸ್ ಶೀಟಿನಲ್ಲಿರುವ Observations Notes ನಲ್ಲಿ ಬಹಳಷ್ಟು ವರದಿಗಳ ವ್ಯತ್ಯಾಸ ಮತ್ತು ಅನುಮಾನದಿಂದ ಕೂಡಿರುತ್ತದೆ.

ಹಾಗೆಯೇ ಶುಶ್ರೂಷಕಿಯರ ವರದಿಯಲ್ಲಿ, ದಿನಾಂಕ:08.06.2016 ರಂದು ಸಂಜೆ 6.00 ಗಂಟೆಯಿಂದ 7.30 ರವರೆಗೆ ಬಹಳಮುಖ್ಯವಾದ ವರದಿಗಳು ಲಭ್ಯವಿರುವುದಿಲ್ಲ. ರೋಗಿಗೆ ರಕ್ತ ವಾಂತಿಯಾಗಿರುವುದು, ಮಂಚದಿಂದ ಬಿದ್ದು ಹಲ್ಲು ಮುರಿದಿರುವುದು, ನೋವಿಗೆ ನೀಡಿದ ಚುಚ್ಚುಮದ್ದು ಹಾಗೂ ರೋಗಿಗೆ ಬಂದಿರುವ Seizures ಗಳ ಬಗ್ಗೆ ಹಾಗೂ ಶುಶ್ರೂಷಕಿಯರು ಯಾವ ಔಷಧಿಗಳನ್ನು ನೀಡಿದರು ಎಂಬುದರ ಬಗ್ಗೆ ಯಾವುದೇ ದಾಖಲೆಗಳನ್ನು ಶುಶ್ರೂಷಕಿಯರು ನಮೂದಿಸಿರುವುದಿಲ್ಲ. ಮಧ್ಯಾಹ್ನ 3.00 ಗಂಟೆಗೆ ವೈದ್ಯರು ರೋಗಿಯ ಸಂಬಂಧಿಯಾದ ಶ್ರೀ ಮುನೇಗೌಡ ರವರಿಂದ Grave Risk Consent ಗೆ ಸಹಿಯನ್ನು ಪಡೆದಿರುತ್ತಾರೆ. ಸಂಜೆ 4.00 ಗಂಟೆಗೆ ರೋಗಿಯ ಸಂಬಂಧಿಯಾದ ಶ್ರೀ ಮುನೇಗೌಡ ಮತ್ತು ಶ್ರೀ ಬಸವರಾಜ್ ರವರಿಂದ Discharge against Medical Advice ಗೆ ಸಹಿಯನ್ನು ಪಡೆದು ರೋಗಿಯನ್ನು Discharge ಮಾಡಿರುವುದಾಗಿ ಕೇಸ್ ಶೀಟ್‌ನಲ್ಲಿ ನಮೂದಿಸಿರುತ್ತಾರೆ. ಆದರೆ ರೋಗಿಯ ಪತ್ನಿಯಾದ ಶ್ರೀಮತಿ ವಾಣಿ ಅವರ ಹೇಳಿಕೆಯಲ್ಲಿ ವೈದ್ಯಾಧಿಕಾರಿಗಳು ರೋಗಿಯು ಮರಣ ಹೊಂದಿರುತ್ತಾರೆಂದು ತಿಳಿಸಿ ರೋಗಿಯನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಮುಖವನ್ನು ಸಹ ಮುಚ್ಚಿಸಿ ಅವರ ವಶಕ್ಕೆ ನೀಡಿರುತ್ತಾರೆ ಹಾಗೂ ಯಾವುದೇ ದಾಖಲೆಯನ್ನು ಸಹ ನೀಡದೇ ಎರಡು ದಿನದ ನಂತರ ಮರಣ ಪ್ರಮಾಣ ಪತ್ರವನ್ನು ನೀಡುವುದಾಗಿ ಅವರಿಗೆ ತಿಳಿಸಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಆರ್‌ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಶ್ರೀ ವೆಂಕಟೇಶ್ ರವರ ಕೇಸ್‌ಶೀಟ್ ಅನ್ನು ತಿದ್ದಿರುವುದು ಕಂಡು ಬಂದಿರುತ್ತದೆ. ಕೇಸ್‌ಶೀಟನಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಗಳು ಅನುಮಾನಸ್ಪದವಾಗಿರುತ್ತದೆ. ಜೀವಂತವಾಗಿ ಈಗ ಕೋಮ ಸ್ಥಿತಿಯಲ್ಲಿರುವ ಶ್ರೀ ವೆಂಕಟೇಶ್ ರವರನ್ನು ದಿ:09.06.2016 ರಂದು ಮೃತಪಟ್ಟಿದ್ದಾರೆಂದು ತಪ್ಪಾಗಿ ಧೃಢೀಕರಿಸಿರುವುದು ಕಂಡು ಬಂದಿರುತ್ತದೆಂದು ವರದಿಯನ್ನು ಸಲ್ಲಿಸಿರುತ್ತಾರೆ.

ಆಯೋಗವು ಸದರಿ ವರದಿಯನ್ನು ಪರಿಶೀಲಿಸಿ, ಆರ್‌ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಶ್ರೀ ವೆಂಕಟೇಶ್ ಅವರ ಕೇಸ್ ಶೀಟನ್ನು ತಿದ್ದಿರುವುದು ಕಂಡು ಬಂದಿದ್ದು, ಕೇಸ್‌ಶೀಟ್‌ನಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಗಳು ಅನುಮಾನಸ್ಪದವಾಗಿರುತ್ತದೆ. ಜೀವಂತವಾಗಿ ಈಗ ಕೋಮ ಸ್ಥಿತಿಯಲ್ಲಿರುವ ಶ್ರೀ ವೆಂಕಟೇಶ್ ಅವರನ್ನು ಮೃತಪಟ್ಟಿದ್ದಾರೆಂದು ತಪ್ಪಾಗಿ ಧೃಢೀಕರಿಸಿರುವುದು ಇತ್ಯಾದಿ ಲೋಪದೋಷಗಳು ಕಂಡು ಬಂದಿರುವುದಾಗಿ ಸ್ಪಷ್ಟವಾಗಿ ವರದಿಯಲ್ಲಿ ನಮೂದಿಸಿದ್ದರೂ ಸಹ ಸದರಿ ಆಸ್ಪತ್ರೆಯ ತಪ್ಪಿತಸ್ಥರ ಡಾಕ್ಟರ್ ವಿರುದ್ಧ ಯಾವುದೇ ಕ್ರಮ ಜರುಗಿಸದೇ ವರದಿ ಸಲ್ಲಿಸಿರುವುದು ಸಮಂಜಸವಲ್ಲ. ಆದುದರಿಂದ ಸದರಿ ಆಸ್ಪತ್ರೆಯ ವಿರುದ್ಧ ಮತ್ತು ತಪ್ಪಿತಸ್ಥರ ಡಾಕ್ಟರ್ ಹಾಗೂ ಶುಶ್ರೂಕ ಸಿಬ್ಬಂದಿ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಿ, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೋಲಾರ ಜಿಲ್ಲೆ ರವರಿಗೆ ಸೂಚಿಸಲಾಗಿದ್ದು, ಅದರಂತೆ ಸದರಿಯವರು ಕೋಲಾರದ ಜಾಲಪ್ಪ ಆಸ್ಪತ್ರೆಯ ತಪ್ಪಿತಸ್ಥ ವೈದ್ಯರ ವಿರುದ್ಧ ನೇರವಾಗಿ ಶಿಸ್ತು ಕ್ರಮ ಕೈಗೊಳ್ಳಲು ತಮ್ಮ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಸದರಿ ತಪ್ಪಿತಸ್ಥ ವೈದ್ಯರ ವಿಚಾರಣೆ ನಡೆಸಿ ಕರ್ನಾಟಕ ಮೆಡಿಕಲ್ ಕೌನ್ಸಿಲ್ ನಿಯಮಾವಳಿಗಳನ್ವಯ ಸೂಕ್ತ ಕ್ರಮ ಕೈಗೊಂಡು ಆಯೋಗಕ್ಕೆ ಮಾಹಿತಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆಂದು ಮಾಹಿತಿಯನ್ನು ಸಲ್ಲಿಸಿರುತ್ತಾರೆ.

ಅದರಂತೆ ರಿಜಿಸ್ಟ್ರಾರ್, ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರು ರವರು ದಿನಾಂಕ:30.05.2020 ರಂದು ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ.

The Karnataka Medical Council Committee is not reconstituted after the Election for the members of the Council which was held on January 2020. There are Election writ petitions filed before the High Court. Till reconstitution of the Council, enquiries are not conducted by the Council.

The said case is posted for filing Affidavit by the complainant Smt.Vani the decision of K.M.C will be intimated to you after completion of enquiry and legal procedure.

ಪತ್ರಿಕಾ ವರದಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೋಲಾರ ಜಿಲ್ಲೆ ಹಾಗೂ ರಿಜಿಸ್ಟ್ರಾರ್, ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರು ಅವರ ವರದಿಗಳನ್ನು ಪರಿಶೀಲಿಸಲಾಗಿ, 2020 ರ ಜನವರಿಯಲ್ಲಿ ಕರ್ನಾಟಕ ಮೆಡಿಕಲ್ ಕೌನ್ಸಿಲ್ ಸದಸ್ಯರ ಚುನಾವಣೆ ನಡೆದ ನಂತರ ಚುನಾವಣೆ ಬಗ್ಗೆ ಘನ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದು ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಮೆಡಿಕಲ್ ಕೌನ್ಸಿಲ್ ಕಮಿಟಿಯನ್ನು ಪುನರ್ ರಚಿಸಿರುವುದಿಲ್ಲ.ಕಮಿಟಿ ರಚನೆಯಾಗುವವರೆಗೆ ವಿಚಾರಣೆಯನ್ನು ನಡೆಸಲು ಸಾಧ್ಯವಾಗುವುದಿಲ್ಲವೆಂದು ವರದಿ ಮಾಡಿರುವುದರಿಂದ ಹಾಗೂ ಈ ಪ್ರಕರಣ 2016 ರಿಂದ ಬಾಕಿ ಇರುವುದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

ಮುಂದುವರೆದು ಕರ್ನಾಟಕ ಮೆಡಿಕಲ್ ಕೌನ್ಸಿಲ್ ಕಮಿಟಿ ಪುನರ್ ರಚಿಸಿದ ನಂತರ ಪ್ರಕರಣವನ್ನು ಕಮಿಟಿಯ ಮುಂದೆ ಮಂಡಿಸಿ, ಕಮಿಟಿಯು ಕೈಗೊಳ್ಳುವ ತೀರ್ಮಾನದಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿ ಸಲ್ಲಿಸುವಂತೆ ರಿಜಿಸ್ಟ್ರಾರ್, ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರು ಅವರಿಗೆ ಸೂಚಿಸಿದೆ."

Sd/-
(ಶ್ರೀ ಆರ್.ಕೆ.ದತ್ತ)
ಸದಸ್ಯರು

ಮೇಲ್ಕಂಡ ಆದೇಶದಂತೆ, ಈ ಆದೇಶದ ಪತ್ರವನ್ನು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

28/8/2020
ಸಹಾಯಕ ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

ಪ್ರತಿ: 1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ಇವರ ಮಾಹಿತಿಗಾಗಿ.

2) ಸಂಪಾದಕರು, ಪ್ರಜಾವಾಣಿ ದಿನಪತ್ರಿಕೆ, ನಂ.75, ಎಂ.ಜಿ.ರೋಡ್, ಬೆಂಗಳೂರು ಇವರ ಮಾಹಿತಿಗಾಗಿ.

BS